ಅವನ ಮನದಾಳದಲ್ಲಿ ಮಿಂಚೊಂದು ಸಂಚರಿಸಿದಂತಾಗಿ, ತನ್ನ ಬಸ್ ಪ್ರಯಾಣ ಮತ್ತು ಬಸ್ಸಿನ ಹಿಂಭಾಗದಲ್ಲಿ ಕುಳಿತ ಇಬ್ಬರು ಮುಸ್ಲಿಂ ಮಹಿಳೆಯರು ಮಾತ್ರ ಅವನಿಗೆ ಗೋಚರಿಸಿ, ತಾನೆಣಿಸಿದಂತೆ ಅವರು ಯುವಕರ ಕೈಯಲ್ಲಿ ಸಿಕ್ಕಿ ಹಾಕಿಕೊಂಡು ಮಾನಭಂಗದ ಪ್ರಸಂಗವನ್ನು ಎದುರಿಸುತ್ತಿದ್ದಾರೆ ಎಂಬ ಭಾವವೊಂದು ದಿಗ್ಗನೆ ಗೋಚರಿಸಿತು. ಅವನು ಒಮ್ಮೆಲೆ ಎದ್ದು ನಿಲ್ಲುವುದಕ್ಕೂ ಆ ದುರಂತದ ಕೂಗನ್ನು ಕೇಳಿಸಿಕೊಂಡಿದ್ದ ಡ್ರೈವರ್ ಬಸ್ಸನ್ನು ನಿಲ್ಲಿಸುವುದಕ್ಕೂ ಸಮವಾಯಿತು. ಎರ್ರಾಬಿರ್ರಿಯಾಗಿ ಹೊಡೆದುಕೊಳ್ಳುತ್ತಿದ್ದ ಎದೆ ಬಡಿತವನ್ನು ತಹಬಂದಿಗೆ ತರುವ ವಿಫಲ ಪ್ರಯತ್ನವನ್ನು ಮಾಡುತ್ತಾ ಖಲಂದರ್ ಬಸ್ಸಿನ ಹಿಂಭಾಗದ ಸೀಟಿನತ್ತ ನೋಡಿದ. ಆ ಇಬ್ಬರು ಹೆಣ್ಣುಮಕ್ಕಳ ಬೊಬ್ಬೆಯು ತಾರಕಕ್ಕೇರಿತ್ತು. ಅದ್ಯಾವ ರೀತಿಯ ಯಾತನೆಯ ಮತ್ತು ಯಾಚನೆಯ ಕೂಗುಗಳು ಅವರ ಕಂಠದಿಂದ ಹೊರಡುತ್ತಿದ್ದವೋ! ದೇವರೇ ಏನಾಗುತ್ತಿದೆ ಅಲ್ಲಿ? ಎಲ್ಲಾ ಯುವಕರು ಒಮ್ಮೆಲೆ ಗೋಡೆ ಕಟ್ಟಿದಂತೆ ಆ ಹೆಣ್ಣುಮಕ್ಕಳನ್ನು ಸುತ್ತುವರೆದಿದ್ದರು. ಹಿಂದಿನಿಂದ ನಾಯಕನ ಗಟ್ಟಿಯಾದ ಆದೇಶದ ಧ್ವನಿ ಮೊಳಗುತ್ತಿತ್ತು, "ಡ್ರೈವರ್ ನಿಲ್ಲಿಸಿರಿ ಬಸ್ಸನ್ನ". ಬಸ್ ನಿಂತಾಗಿತ್ತು.

ಖಲಂದರ್ ಜೋಲಿ ಹೊಡೆಯುತ್ತಲೇ ತನ್ನನ್ನು ತಾನು ಸಾವರಿಸಿಕೊಂಡು ಆ ಸ್ಥಳಕ್ಕೆ ಬಂದರೆ, ಅವನ ಇಣುಕು ನೋಟಕ್ಕೂ ಕೂಡ ಅಲ್ಲಿ ಜಾಗ ಸಿಗಲಿಲ್ಲ. ಅಲ್ಲಿ ಸುತ್ತುವರೆದಿದ್ದ ಆ ಯುವಕರನ್ನು ಮುಟ್ಟಿ ಸರಿಸಬಹುದೇ ಬೇಡವೇ ಎಂಬುದು ಅವನ ಆತಂಕವಾಗಿತ್ತು. ಯಾರೊಬ್ಬರೂ ಜಾಗ ಬಿಡಲಿಲ್ಲ. ಯಾರನ್ನಾದರೂ ಎಳೆದು ಹಾಕಿ ಪಕ್ಕಕ್ಕೆ ಸರಿಸುವ ಧೈರ್ಯವೂ ಅವನಿಗೆ ಬರಲಿಲ್ಲ. ಆದರೂ ಅವನು ಸಮೀಪದ ಸೀಟಿನ ಮೇಲೆ ಹತ್ತಿ ನೋಡಿದಾಗ ಅಲ್ಲಿನ ದೃಶ್ಯವೇ ಬೇರೆಯಾಗಿತ್ತು. ಆ ಮಹಿಳೆಯರನ್ನು ಸುತ್ತುವರೆದಿದ್ದರೂ ಆ ಯುವಕರೂ ಕೂಡ, ''ಏನಾಯ್ತು?... ಏನಾಯ್ತು?'' ಎಂದು ಜೋರು ಜೋರಾಗಿ ಕೇಳುತ್ತಾ ಗದ್ದಲವೆಬ್ಬಿಸಿದ್ದರು. ವಯಸ್ಸಾಗಿದ್ದ ಮಹಿಳೆ ಘನಘೋರವಾಗಿ ಅಳುತ್ತಾ ತನ್ನೊಡನೆ ಇನ್ನೊಬ್ಬ ಹೆಣ್ಣುಮಗಳನ್ನು ತಬ್ಬಿ ಹಿಡಿದಿದ್ದಳು. ಮತ್ತು ಆ ಇನ್ನೊಬ್ಬ ಯುವತಿಯು ತನ್ನ ತೊಡೆಯ ಮೇಲಿದ್ದ ಕೂಸನ್ನು ಎದೆಗವಚಿಕೊಂಡು ಹೃದಯ ಬಿರಿಯುವಂತೆ ತಾರಕಕ್ಕೇರಿದ ಧ್ವನಿಯಲ್ಲಿ ಅಳುತ್ತಿದ್ದಳು. ಅಳುವಿನ ಮಧ್ಯೆ ಅವಳು ಅತ್ಯಂತ ದಯಾರ್ದ್ರವಾಗಿ, ''ಅಲ್ಲಾ... ಅಲ್ಲಾ... ಇದೇನು ಮಾಡಿಬಿಟ್ಟೆ?'' ಎಂದು ಎದೆ ಬಡಿದುಕೊಳ್ಳಲಾರಂಭಿಸಿದಳು. ಆ ಮಹಿಳೆಯರ ಪರಿಸ್ಥಿತಿಯನ್ನು ಕಂಡು ಖಲಂದರ್ ಒಂದಿಷ್ಟು ನೆಮ್ಮದಿ, ಮತ್ತೊಂದಿಷ್ಟು ಅಳುಕು ಹಾಗೂ ಅಪಾರ ವೇದನೆಗೆ ಗುರಿಯಾದ. ತಾನು ಭಯಪಟ್ಟಂತೆ ಈ ಹೆಣ್ಣುಗಳ ಮೇಲೆ ಯುವಕರು ಆಕ್ರಮಣವೇನನ್ನೂ ಮಾಡುತ್ತಿಲ್ಲ ಮತ್ತು ಅವರ ಮೇಲೆ ಯಾವುದೇ ಅಮಾನವೀಯ ಕೃತ್ಯವು ನಡೆಯುತ್ತಿಲ್ಲ ಎಂಬುದು ಅವನಿಗೆ ಖಚಿತವಾಯಿತು. ಯುವಕರಲ್ಲಿ ಒಂದಿಬ್ಬರು ಬಾಗಿ ಆಕೆಯ ಕೈಯಿಂದ ಮಗುವನ್ನು ಎತ್ತಿಕೊಳ್ಳಲು ಪ್ರಯತ್ನ ಪಡುತ್ತಿದ್ದರು. ಆ ಪ್ರಯತ್ನಕ್ಕೆ ಅಪಾರ ಪ್ರತಿರೋಧವನ್ನು ಒಡ್ಡಿದ ಆ ಯುವತಿ ಯಾವುದೇ ಕಾರಣಕ್ಕೂ ಮಗುವನ್ನು ಅವರ ಕೈಗೆ ಒಪ್ಪಿಸಲು ಸಿದ್ಧಳಿಲ್ಲದೆ ಇನ್ನಷ್ಟು ಬಲವಾಗಿ ಎದೆಗವಚಿಕೊಂಡು ಕಿರುಚಾಡಿ ಅಳುತ್ತಿದ್ದಳು. ಒಂದೆರಡು ನಿಮಿಷ ದಿಗ್ಮೂಢನಂತಿದ್ದ ಖಲಂದರ್‌ಗೆ ಆ ಮಗುವಿಗೆ ಸಂಬಂಧಪಟ್ಟಂತೆ ಏನೋ ಸಮಸ್ಯೆಯಾಗಿದೆ ಎಂದೆನಿಸಿತು. ಕೂಡಲೇ ತನ್ನ ಜವಾಬ್ದಾರಿಯ ನೆನಪಾದಂತೆ ಅವನು ಆ ಯುವಕರನ್ನು ಒಂದಿಷ್ಟು ಸರಿಸಿ ಮಹಿಳೆಯರಿಗೆ ಸಮೀಪವಾಗಲು ಪ್ರಯತ್ನಿಸಿದ.

ಆಗಲೇ ನಾಯಕ್ ತನ್ನ ತಂಡದವರಿಗೆ ಆದೇಶ ಮಾಡುತ್ತಿದ್ದ, "ಇಳಿಯಿರಿ ಎಲ್ಲಾ ಕೆಳಗೆ ಇಳಿಯಿರಿ". ಮತ್ತು ಹಾಗೆ ಮಾತನಾಡುತ್ತಲೇ ಅವನು ಖಲಂದರ್‌ನನ್ನು ಕಂಡ. ಖಲಂದರ್‌ನ ಕಣ್ಣುಗಳು ಕೂಡ ಅವನನ್ನು ಸಂಧಿಸಿದವು. ನಾಯಕ್‌ಗೆ ಆಪತ್ಬಾಂಧವ ಗೋಚರಿಸಿದಂತಾಯಿತು. ಅಲ್ಲಿಂದಲೇ, "ಚಿಗಪ್ಪ" ಎಂದು ಕೂಗು ಹಾಕಿದ. ಖಲಂದರ್‌ಗೆ ಅವನೊಡನೆ ಮಾತು ಬೇಡವಾಗಿತ್ತು. 'ಇದೆಲ್ಲಿಯ ಗ್ರಹಚಾರ'